ಲಾಲಿತ್ಯವೇ ಅಂದು ಅಪ್ಪನ ಮುಖದಲ್ಲಿ ಕಾಣೆಸಿ ವಾದಿ ಭೂಮಿಗಿಳಿದು ಹೋಗಿದ್ದ.

ಅವ್ವ ಕೊರಗಿ ಹಾಸಿಗೆ ಹಿಡಿದಿದ್ದಕ್ಕೆ ಅಷ್ಟು ಕಾಲಗಳ ಅನಂತರ ಕಾರಣ ಸಿಕ್ಕಿತ್ತು.

ನಡಿಗೆಯಲ್ಲಾಗಲಿ, ಮಾತಿನಲ್ಲಾಗಲಿ ರಾಘುವಿನಷ್ಟು ಬಳುಕದ ಅಪ್ಪ ಮಂದಿ ಕಣ್ಣಿಗೆ ಮುರುಕೊಂಡು ಬಿದ್ದಿರಲಿಲ್ಲ. ಆದರೆ, ಜನರು ಕಣ್ಣ ಮುಂದೆ ಕೊಟ್ಟಷ್ಟು ಮರಿಯಾದೆಯನ್ನು ದಾಟಿದ ಮೇಲೆ ಕೊಡುತ್ತಿರಲಿಲ್ಲ ಎಂಬುದನ್ನ ತುಂಬಾ ಸಲ ಗಮನಿಸಿದ್ದ. 'ಏನಿದ್ದರೇನು?' ಎಂಬ ಅಸೂಯೆಯ ಭಾವ ಜನರ ಮುಖದಲ್ಲಿ ಅಸ್ಪಷ್ಟವಾಗಿ ಕಂಡರೂ ಕಾಣದಂತಿರುತ್ತಿತ್ತು. ಮನೆಯವರು ಬಂದರೆ ಜನಗಳ ಬಾಯಿಗೆ ಬೀಗ ಬೀಳುತ್ತಿತ್ತು. ಕಣ್ಣು, ಬಾಯಿಗಳು ವಕ್ರವಾಗಿ ವ್ಯಂಗ್ಯ ಸೂಸುವುದನ್ನ ಅರೆಹೊತ್ತು ಮರೆಯುತ್ತಿದ್ದವು. ಅದರಾಚೆಗೂ ವಾದಿ ಅವಮಾನದಿಂದ ಕುದಿಯುತ್ತಿದ್ದ!

ಒಬ್ಬನೇ ಇದ್ದಾಗ ತನ್ನ ಮುಖ, ಮೂಗಿನ ತಿರುವು, ಹೊಳ್ಳೆ, ಅಗಲವಾದ ಹಣೆ, ತಿರುಚಿಕೊಂಡ ಕಾಲ ಕಿರುಬೆರಳುಗಳನ್ನ ಪರೀಕ್ಷಿಸಿಕೊಂಡು ಅವುಗಳಲ್ಲಿ ಅಪ್ಪನನ್ನು ಹುಡುಕುತ್ತಿದ್ದ.

ಅಪ್ಪ ಅವ್ವನ ಮಧ್ಯೆ ಆಗಿಂದಾಗ್ಗೆ ಒಳ ಮನೆಯಲ್ಲಿ ಜಗಳಗಳಾಗುತ್ತಿದ್ದವು. ಮೊದಲು ಅದಕ್ಕೆಲ್ಲ ತಲೆ ಕೆಡಿಸಿಕೊಳ್ಳದೆ ಗೊರಕೆ ಹೊಡೆಯುತ್ತಿದ್ದ ವಾದಿ ಈಗ ಮೈಯೆಲ್ಲ ಕಿವಿಯಾಗತೊಡಗಿದ್ದ. ಅವ್ವ ಬೋರಾಡಿ ಅಳುತ್ತಿದ್ದಳು. ಉಕ್ಕಿ ಬರುವ ಅಳುವನ್ನ ತಡೆಯಲು ಬಾಯಿಗೆ ಸೆರಗು ತುರುಕಿಕೊಂಡು ಶಬ್ದ ಬರದಂತೆ ವೃಥಾ ಪ್ರಯತ್ನಿಸುತ್ತಿದ್ದಳು.

''ಅದೇನ ಮಾಡಿದ್ರು ಮನಿವೊಳಗ ಆ ಮೂಲಿ ಕತ್ಲ ಕೋಣ್ಯಾಗ ಮಾಡ್ರೀ, ನನ ಮಡಿ ಸೀರಿ ಉಟಗಾರಿ, ನನ ಬ್ಲೌಜ ಲಂಗ ಎಲ್ಲಾ ನಿಮ್ಮಾಕ ಇರ್ಲಿ, ಆದರ ಹುಡುಗೂರ ಸಾವಸಕ ಹೋಗೋದು ಬ್ಯಾಡ! ನಾಳಿ ಗೊತ್ತಾದ್ರ ಊರಾಗ ತಲೀ ಎತ್ತಿ ತಿರಗಾದ ಹೆಂಗಾ, ಹೊಟ್ಯಾಗ ಹುಟ್ಟಿದ ಮಕ್ಳು ಬಾಳೇವೆಂಗ'' ಅಂತ ಕಾಲಿಗೆ ಬಿದ್ದು ಅಳುತ್ತಿದ್ದಳು.

ಅತ್ತು ಅತ್ತೇ ಆಕೆ ಹಂಚಿಕಡ್ಡಿಯಂತಾಗಿದ್ದಳು.

ಯಾರಾದರೂ ಹಾಲು ಮೊಸರಿಗೆ ಬಂದು,

''ಯವ್ವಾ ಗೌಡಸಾನಿss'' ಅಂತ ಕೂಗಿದರೂ, ''ಏನ ಬಂತವಾ ಲಿಗಾಡಿ, ಎದಕ ಬಂದಾರ ಏನ''

